46

ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/16/2015-16/ ದಿನಾಂಕ: 26-05-2016

**ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,**

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| **ಶ್ರೀಮತಿ ಬಡಿಗೇರ ಸುಶೀಲಮ್ಮ ಗಂಡ ಲೇಟ್ ನಾಗಮ್ಮ ಶ್ರೀ ಬಡಿಗೇರ ಉಮ್ಮಪ್ಪ ಊರ್ಫ ಉಮಾಪತಿ ತಂದೆ ಲೇಟ್ ಬಡಿಗೇರ ಕಾಳಪ್ಪ ಸಾಕೀನ್ ಶಿವಲಿಂಗನಹಳ್ಳಿ ಗ್ರಾಮ** | **ಶ್ರೀ ಜೆ.ಅಶೋಕ ತಂದೆ ಲೇಟ್ ಬಸಪ್ಪ ಸಾಕೀನ್ ಶಿವಲಿಂಗನಹಳ್ಳಿ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| **ಶಿವಲಿಂಗನಹಳ್ಳಿ** | **86/4** | **2.47** |

**ಪ್ರಸ್ತಾವನೆ :**

ವಾದಿ ಶ್ರೀ ಬಡಿಗೇರ ಉಮ್ಮಪ್ಪ ಊರ್ಫ ಉಮಾಪತಿ ತಂದೆ ಲೇಟ್ ಬಡಿಗೇರ ಕಾಳಪ್ಪ ಸಾಕೀನ್ ಶಿವಲಿಂಗನಹಳ್ಳಿ ಗ್ರಾಮರವರು ನೊಂದಣಿ ಹಕ್ಕು ಬಿಡುಗಡೆ ಪತ್ರ ಸಂಖ್ಯೆ 659/2015-16 ದಿನಾಂಕ 21-05-2015ರಂತೆ ಮೇಲಿನ ದಾವಾ ಜಮೀನನ್ನು ಬಡಿಗೇರ ಸುಶೀಲಮ್ಮ ಗಂಡ ನಾಗಪ್ಪರವರಿಂದ ಹಕ್ಕು ಬಿಡುಗಡೆ ಪತ್ರವನ್ನು ಬರೆಸಿಕೊಂಡಿರುತ್ತಾರೆ. 'ಜೆ' ನಮೂನೆ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿದಾಗ, ದಿನಾಂಕ 26-08-2015ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿರವರು ಎಂ.ಆರ್.ನಂ: ಹೆಚ್08/2015-16 ದಿನಾಂಕ 27-07-2015 ರಂದು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 29-09-2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಪ್ರತಿವಾದಿಗಳು ತಾವು ನೀಡಿದ ತಕರಾರು ಅರ್ಜಿಯನ್ನು ವಾಪಾಸ್ ಪಡೆದು, ತಾವುಗಳು ದಿನಾಂಕ 29-09-2015ರ ರೂ 20.00 ರೂಗಳ ಛಾಪಾ ಕಾಗದದ ಮೇಲೆ ರಾಜಿ ಸಂದಾನ ಪತ್ರ ಬರೆದುಕೊಂಡು ವಾದಿಯ ಹೆಸರಿಗೆ ಈ ದಾವಾ ಜಮೀನು ಸೇರ ತಕ್ಕದ್ದು ಎಂದು ಅವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಒಪ್ಪಿಗೆ ವ್ಯಕ್ತಪಡಿಸಿ, ಕೇಳಿಕೊಂಡಿರುವುದರಿಂದ ಹಾಗೂ ನೊಂದಣಿ ದಸ್ತಾವೇಜಿನ ಪ್ರಕಾರ ಹಕ್ಕು ಬದಲಾವಣೆ ಮಾಡಬೇಕಾಗಿರುವುದರಿಂದ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ಪ್ರತಿವಾದಿಗಳು ತಾವು ನೀಡಿದ ಆಕ್ಷೇಪಣೆಯನ್ನು ವಾಪಾಸ್ ಪಡೆದು, ಹಾಗೂ ರಾಜಿಪತ್ರದ ಮೂಲಕ ರಾಜಿಮಾಡಿಕೊಂಡಿರುವುದರಿಂದ ಮತ್ತು ವಾದಿಗಳ ಹೆಸರಿಗೆ ಹಕ್ಕುಬಿಡುಗಡೆ ಪತ್ರದ ಪ್ರಕಾರ ಶಿವಲಿಂಗನಹಳ್ಳಿ ಗ್ರಾಮದ ಸ.ನಂ.86/4 ವಿಸ್ತೀರ್ಣ 2.47 ಎಕರೆ ಜಮೀನನ್ನು ವಾದಿಯಾದ ಶ್ರೀ ಬಡಿಗೇರ ಉಮ್ಮಪ್ಪ ಊರ್ಫ ಉಮಾಪತಿ ತಂದೆ ಲೇಟ್ ಬಡಿಗೇರ ಕಾಳಪ್ಪ ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/7/16

**ತಹಶೀಲ್ದಾರರು**
**ಹಡಗಲಿ.**

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.